ಕಾಪು ಕ್ಷೇತ್ರದ ಕಟಪಾಡಿ ಮಂಡಲ ಪಂಚಾಯಿತಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಂ ಕಚೇರಿ

೨೧೪೫. ಶ್ರೀ ವಸಂತ ವಿ. ಸಾಲಿಯಾನ್(ಕಾಪು).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಪು ಕ್ಷೇತ್ರದ ಕಟಪಾಡಿ ಮಂಡಲಕ್ಕೆ ಒಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಶಾಖಾ ಕಛೇರಿಯು ಮಂಜೂರಾಗಿರುವುದು ನಿಜವೆ ;

ಆ) ಹಾಗಿದ್ದಲ್ಲಿ ಸದರಿ ಕಛೇರಿಯ ಕಟ್ಟಡವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಲಕ್ಷ್ಮೀನರಸಿಂಹಯ್ಯ(ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು).—

ಅ) ನಿಜ.

ಆ) ಕಟಪಾಡಿಯ ಶಾಖಾ ಕಛೇರಿಯು ದಿನಾಂಕ ೧-೩-೧೯೮೭ರಿಂದ ಕಾರ್ಯಾರಂಭ ಮಾಡಿದೆ.

ಶ್ರೀ ವಸಂತ ವಿ. ಸಾಲಿಯಾನ್.—ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿಗೆ ಶಾಖಾ ಕಛೇರಿ ಯಾವಾಗ ಮಂಜೂರಾಗಿದ್ದು ? ಕಟಪಾಡಿಯ ಶಾಖಾ ಕಛೇರಿಯು ೧-೩-೮೭ ರಿಂದ ಆರಂಭವಾಗಿದೆ ಎಂದು ಹೇಳಿದ್ದೀರಿ. ಇದಕ್ಕೆ ಸ್ವಂತ ಕಟ್ಟಡ ಇಲ್ಲ. ಇಲಾಖಾ ವತಿಯಿಂದ ಸರ್ಕಾರ ಯಾವಾಗ ಸ್ವಂತ ಕಟ್ಟಡಕ್ಕಾಗಿ ಜಾಗ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡುತ್ತದೆಂಬುದನ್ನು ಹೇಳಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅಲ್ಲಿ ನಿವೇಶನ ಸಿಗದೇ ಇರುವುದರಿಂದ ಬಾಡಿಗೆ ಕಟ್ಟಡದಲ್ಲಿ ಈಗ ಕೆಲಸ ನಡೆಯುತ್ತಿದೆ. ಅಲ್ಲಿ ಜಾಗವನ್ನು ಪಡೆಯುವುದಕ್ಕೋಸ್ಕರ ವಿಶೇಷವಾದ ಪ್ರಯತ್ನ ಮಾಡಿದರೂ ಕೂಡ ಇಲ್ಲಿಯವರೆಗೆ ಸಿಕ್ಕಿಲ್ಲ. ಮಾನ್ಯ ಶಾಸಕರಿಗೆ ಈ ಸದನದಲ್ಲಿ ಬೇಡಿಕೊಳ್ಳುತ್ತೇನೆ ತಾವು ಸಹಾಯ ಮಾಡಿ ತಕ್ಷಣ ನಿವೇಶನ ಒದಗಿಸುವುದಕ್ಕೆ ಸಹಾಯ ಮಾಡಿದರೆ ಆದಷ್ಟು ಬೇಗ ಕಟ್ಟಡ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಸಂತ ವಿ ಸಾಲಿಯಾನ್.—ಅಧ್ಯಕ್ಷರೇ, ಈಗಾಗಲೇ ಡೆಪ್ಯೂಟಿ ಕಮಿಷನರ್‌ರವರು ಜಾಗದ ಬಗ್ಗೆ ತಹಶೀಲ್ದಾರ್‌ರವರಿಗೆ ಮನವಿ ಮಾಡಿದ್ದಾರೆ. ಈ ಮನವಿ ಮಾಡಿ ಸುಮಾರು ೨ ವರ್ಷಗಳಾಗಿವೆ. ಅಲ್ಲಿ ಜಾಗ ಇದ್ದೂ ಸಹಾ ಜಾಗ ಇಲ್ಲ ಎನ್ನುವ ರೀತಿಯಲ್ಲಿ ರೆವಿನ್ಯೂ ಇಲಾಖೆಯವರು ವರದಿಯನ್ನು ಕಳುಹಿಸಿದ್ದಾರೆ. ಅಲ್ಲಿ ಜಾಗ ಇದೆ ಸಂಬಂಧಪಟ್ಟ ಗ್ರಾಮ ಲೆಕ್ಕಿಗರೂ ಸಹಾ ಜಿಲ್ಲಾಧಿಕಾರಿಗಳಿಗೆ ವರದಿ ಕಳುಹಿಸಿದ್ದಾರೆ. ಡೆಪ್ಯುಟಿ ಕಮಿಷನರ್‌ರವರಿಂದ ಅಲ್ಲಿ ಜಾಗವನ್ನು ಮಂಜೂರು ಮಾಡಿಸಿಕೊಂಡು ಆದಷ್ಟು ಬೇಗ ಕಟ್ಟಡವನ್ನು ಕಟ್ಟಬೇಕು. ನಮ್ಮ ಗ್ರಾಮದಲ್ಲಿ ಆದಷ್ಟು ಬೇಗ ಈ ಕಛೇರಿಗೆ ಸ್ವಂತ ಕಟ್ಟಡ ಆಗಬೇಕೆಂದು ಹೇಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರು ದಯವಿಟ್ಟು ಜಾಗದ ವಿವರವನ್ನು ಕೊಟ್ಟರೆ ಜಾಗದ ಸಮಸ್ಯೆ ಏನಿದೆ ಎಂಬುದನ್ನು ತಿಳಿದುಕೊಂಡು ಶೀಘ್ರವಾಗಿ ಅಕ್ವೈರ್ ಮಾಡುವುದಕ್ಕೆ ವಿಶೇಷವಾದ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆ.

ತುಮಕೂರು ಜಿಲ್ಲೆಯಲ್ಲಿ ಸರ್ಕಾರಿ ರೇಷ್ಮೆ ಫಾರಂಗಳು

೨೨೧೩. ಶ್ರೀ ಜೆ.ಎಸ್. ಶಿವಸಂಜಪ್ಪ (ಗುಬ್ಬಿ).—ಮಾನ್ಯ ಕಾನೂನು ಸಂಸದೀಯ ವ್ಯವಹಾರ ಗಳು ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ರೇಷ್ಮೆ ಬೆಳೆ ಜಮೀನು ವಿಸ್ತೀರ್ಣವೆಷ್ಟು ? ಆ ಪೈಕಿ ಸರ್ಕಾರದ ರೇಷ್ಮೆ ಬೆಳೆ ಬೆಳೆಯುವ ಫಾರಂಗಳು ಎಷ್ಟು ? ಒಂದೊಂದು ಫಾರಂನಲ್ಲಿ ರೇಷ್ಮೆ ಬೆಳೆಯುತ್ತಿರುವ ಹಾಗೂ ಬರುತ್ತಿರುವ ರೇಷ್ಮೆ ಉತ್ಪತ್ತಿ ಮತ್ತು ವೆಚ್ಚ ಎಷ್ಟು ? (ವಿವರ ನೀಡುವುದು).